## 22

# ಕ್ರಿಸ್ತನನ್ನು ಘೋಷಿಸು ಇದರ ಅರ್ಥವೇನು

## (8:5, 12)

ಅಪೊಸ್ತಲರ ಕೃತ್ಯಗಳು 8:5ರಲ್ಲಿ ನಾವು ಓದುವಂತೆ "ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ *ಕ್ರಿಸ್ತನನ್ನು* ಅಲ್ಲಿರುವವರಿಗೆ *ಪ್ರಕಟಿಸಿದನು*" (ಒತ್ತಿ ಹೇಳಿದ್ದು ನನ್ನದು). ಸಿಂಗಮನ್ ರೇ[1] ಒಂದು ಸಾರಿ ಹೀಗೆ ಹೇಳಿದರು "ಕೋರಿಯಾ ದೇಶಕ್ಕೆ ಕ್ರಿಸ್ತನ ಬಗೆಗೆ ಬೋಧಿಸಲು ದೇವರಂಥ ಮನುಷ್ಯರ ಅವಶ್ಯಕತೆಯು ಇದೆ ಹೊರತು ಮತ್ತೇನಿಲ್ಲ."[2] ಅದಕ್ಕೆ ನಾವು ಹೀಗೆ ಜೋಡಿಸಬಹುದು "ಜಗತ್ತಿಗೆ ಇದಕ್ಕಿಂತ ಹೆಚ್ಚಿನದೇನೂ ಅವಶ್ಯವಿಲ್ಲ!"[3] ಕ್ರಿಸ್ತನನ್ನು ಪ್ರಕಟಿಸುವದು ಇದರ ಅರ್ಥವೇನು? "ನಾವು ಕ್ರಿಸ್ತನನ್ನು ಬೋಧಿಸುವದು" ಎಂಬ ಪದಗಳು ಯಾವಾಗಲೂ ಸಭೆಯಲ್ಲಿ ಕ್ರಿಸ್ತನನ್ನು ಬೋಧಿಸುವದು ಎಂದು ಸಾಕಷ್ಟುಸಾರಿ ಹೇಳಲ್ಪಟ್ಟರೂ ಹೇಳುವದು ಸುಲಭ ಮಾಡುವದು ಕಷ್ಟ.

ಫಿಲಿಪ್ಪ ಮತ್ತು ಸಮಾರ್ಯದವರ ಕಥೆಯು "ಕ್ರಿಸ್ತನನ್ನು ಬೋಧಿಸುವುದರ" ಒಳನೋಟ ದಲ್ಲಿ ನಮಗೆ ಯಾವುದು ನಿಜವಾದ ಅವಶ್ಯವಾಗಿದೆ ಎಂಬುದನ್ನು ತೋರಿಸುವುದಾಗಿದೆ.

### ಕ್ರಿಸ್ತನ ವ್ಯಕ್ತಿ (8:5)

ಫಿಲಿಪ್ಪನು ಸಮಾರ್ಯದವರಿಗೆ "ಕ್ರಿಸ್ತನನ್ನು ಪ್ರಕಟಿಸಿದನು," ಬೋಧಕರು ಮಾಡುವಂತೆ ಆತನು ಕ್ರಿಸ್ತನ ಬಗೆಗೆ ಶ್ರೇಷ್ಟ ಸತ್ಯಗಳನ್ನು ಬೋಧಿಸಿದನು ಎಂಬುದರಲ್ಲಿ ಸಂಶಯವಿಲ್ಲ: ಯೇಸುವು ಪ್ರವಾದನೆಗಳನ್ನು ಸಂಪೂರ್ಣಗೊಳಿಸಿದ್ದು (2:16; 8:35), ಆತನ ಜೀವಿತದ ವಿವರಗಳು ಮತ್ತು ಅದ್ಭುತಗಳು (2:22; 10:38), ಅವರಿಗಾಗಿ ಶಿಲುಬೆಯ ಮೇಲೆ ಆತನ ಮರಣ (2:23; 8:32; 10:39), ಮರಣದಿಂದ ಆತನ ಪುನರುತ್ಥಾನ (2:32; 10:40), ದೇವರ ಬಲಗಡೆಯಲ್ಲಿರುವುದಕ್ಕಾಗಿ ಆತನ ದಿವಾರೋಹಣ ಮತ್ತು ಪರಲೋಕದಲ್ಲಿ ಆಸೀನನಾಗಿರುವಿಕೆ (2:30-36), ಮತ್ತು ಹಿಂತಿರುಗುವ ಆತನ ವಾಗ್ದನ (10:42). ಈ ಸತ್ಯಗಳು ಫಿಲಿಪ್ಪನ ಬೋಧನೆಯ ಅಸ್ತಿವಾರವೂ ಮತ್ತು ತಿರುಳೂ ಆಗಿದೆ. ಹೇಗೋ "ಕ್ರಿಸ್ತನನ್ನು ಪ್ರಕಟಿಸುವದು" ಇದಕ್ಕಿಂತ ಹೆಚ್ಚಿನದನ್ನು ಒಳಗೊಂಡಿದೆ.

### ಕ್ರಿಸ್ತನ ರಾಜ್ಯ (8:12)

ವಚನ 12 ಹೇಳುವಂತೆ "ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು [ಸಮಾರ್ಯದ] ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು." ವಚನ 12 "ಕ್ರಿಸ್ತನನು ಪ್ರಕಟಿಸುವದು" ಎಲ್ಲಕ್ಕಿಂತ ಹೆಚ್ಚಾಗಿ ಯೇಸುಕ್ರಿಸ್ತನ ಬಗೆಗಿನ ಮೂಲಭೂತವಾದ ಶ್ರೇಷ್ಟ ಸತ್ಯಗಳನ್ನು ಬೋಧಿಸುವುದನ್ನು ಒಳಗೊಂಡಿದೆ ಎಂಬುದನ್ನು ಸಷ್ಟಪಡಿಸುತ್ತದೆ.

ಜಾನ್ ಎ ಡೀಡ್‌ಹೀಡ, ತಮ್ಮ ಪುಸ್ತಕವಾದ *Getting To Know God* ನಲ್ಲಿ ನಮ್ಮ ಧಾರ್ಮಿಕ ಅಭ್ಯಾಸಗಳ ಪರಿಕಲ್ಪನೆಯು ಯಾವಾಗಲೂ ಅಪ್ರಾಯೋಗಿಕವಾದದ್ದಾಗಿರುತ್ತದೆ ಎಂದು ಸೂಚಿಸುತ್ತಾರೆ ಮತ್ತು ದೇವರಲ್ಲಿನ ನಮ್ಮ ನಂಬಿಕೆಯನ್ನು[4] ಸಮರ್ಥವಿರುವ ಕೆಲ "ಕೈಗಳ" ಅವಶ್ಯಕತೆಯು ನಮಗಿದೆ. ಅದೆ ರೀತಿಯು ಕ್ರಿಸ್ತನ ಬಗೆಗೆ ಬೋಧಿಸುವಾಗ ನಿಜವಾಗುತ್ತದೆ. ಒಂದು ವೇಳೆ ನಾನು ಮತ್ತು ನೀನು "ಕ್ರಿಸ್ತನನು ಬೋಧಿಸುವಾಗ," ಜನರಿಗೆ

ಅವರು ಹಿಡಿದುಕೊಳ್ಳಲು ಸಾಧ್ಯವಾಗುವಂತಹ ಕೆಲ "ಕೈಗಳನ್ನು" ಕೊಡುವದು ನಮಗೆ ಅವಶ್ಯವಿದೆ. ಒಬ್ಬ ಮನುಷ್ಯನಿಗೆ ಸಾಮೂಗ್ರಿಗಳನ್ನು ಯಾವ ರೀತಿಯಲ್ಲಿ ಬಳಸಬೇಕು ಎಂದು ಹೇಳದೇ ಒಂದು ಸಂಕೀರ್ಣವಾದ ಸಾಧನವನ್ನು ಕೊಡುವಂತೆ, ಆ ವಿಷಯಗಳಿಂದ ಜನರಿಗೆ ಹೇಗೆ ಪ್ರಯೋಜನವಾಗುತ್ತವೆ ಎಂಬುದನ್ನು ಹೇಳದೆ ಯೇಸುವಿನ ಬಗೆಗೆ ವಿಷಯಗಳನ್ನು ಮಂಡಿಸುವದು ಇದರಂತೆ ಆಗಿದೆ. ವರ್ಷಗಳ ಹಿಂದೆ, ಒಬ್ಬ ಮಾರಾಟಗಾರನು ಒಂದು ಪ್ರತ್ಯೇಕವಾಗಿರುವಂತಹ ಸ್ಥಳಕ್ಕೆ ಹೋಗುವ ಸಾಹಸವನ್ನು ಮಾಡಿದನು ಮತ್ತು ಒಬ್ಬ ಹಿರಿಯ ವ್ಯಕ್ತಿಗೆ ಆತನು ಎಂದೂ ಕಂಡಿರದಂಥ ಅದ್ಭುತವಾದ ರೆಫ್ರಿಜರೇಟರನ್ನು ಮಾರಿದನು. ನಂತರ ಆತನು ಹಿಂತಿರುಗಿ ಬಂದು ಆ ವ್ಯಕ್ತಿಗೆ ಕೇಳಿದನು "ನಿನ್ನ ಹೊಸ ರೆಫ್ರಿಜರೇಟರು ನಿನಗೆ ಹೇಗನ್ನಿಸುತ್ತದೆ?" ಎಂದನು. ಆತನು "ಅದು ನನಗೆ ಬಲು ಇಷ್ಟ," ಎಂದು ಆ ಮನುಷ್ಯನು ಉತ್ತರಿಸಿದನು, "ಆದರೆ ನನ್ನ ತಾಯಿಯು ಐಸನ್ನು ಚಿಕ್ಕ ಟ್ರೇಗಳಲ್ಲಿ ಬಲುವಾಗ ಕಷ್ಟಪಡುತ್ತಾಳೆ" ಅಂದನು. ಸತ್ಯವು ಹೊಸ ವಸ್ತುಗಳಂತೆ. ಅವುಗಳನ್ನು ವಿವರಿಸಲ್ಪಡಬೇಕು ಮತ್ತು ಸರಿಯಾಗಿ ಬಳಿಸಬೇಕು.

ಫಿಲಿಪ್ಪನು "ಕ್ರಿಸ್ತನನ್ನು ಬೋಧಿಸುವದನ್ನು" ಮಾಡುವಾಗ ಆತನ ಬೋಧನೆಗಳು ಪ್ರಾಯೋಗಿಕವಾಗಿದ್ದವು. ವಚನ 12 ತಿಳಿಸುವಂತೆ ಆತನು ಕ್ರಿಸ್ತನ ಬಗೆಗೆ ಬೋಧಿಸುವಾಗ, ಆತನು ದೇವರ ರಾಜ್ಯದ ವಿಷಯವಾಗಿ ಬೋಧಿಸಿದನು. ಇದೇ ಪ್ರಥಮ ಬಾರಿ ಅಧ್ಯಾಯ 1 ರಿಂದ "ದೇವರ ರಾಜ್ಯದ" ವಿಷಯವಾಗಿ ಬಳಿಸಿರುವುದನ್ನು ನಾವು ನೋಡುವವರಾಗಿದ್ದೇವೆ. "ಇದೆಲ್ಲವೂ ಏನು" ಅಪೊಸ್ತಲರ ಕೃತ್ಯಗಳು 1ರಲ್ಲಿ, ನಾವು ಗಮನಿಸುವುದೇನೆಂದರೆ ಪ್ರಾಥಮಿಕವಾಗಿ ಆ ಪರಿಕಲ್ಪನೆಯು ಸುಮಾರ್ತೆಯಲ್ಲಿ ಬಳಸಲ್ಪಟ್ಟಿದ್ದು ಯೇಸು ಸ್ಥಾಪಿಸಿದ ದೇವರ ರಾಜ್ಯದ ಬಗೆಗೆ ಇದೆ, ಅಪೊಸ್ತಲರ ಕೃತ್ಯದಲ್ಲಿ "ಸಭೆ" ಎಂಬುದಕ್ಕೆ ಬಳಸಲಾದ ಪ್ರಾಥಮಿಕವಾದ ಪರಿಕಲ್ಪನೆಯು ರಾಜ್ಯದ/ಸಭೆಯ ಸ್ಥಾಪನೆಯ ಅಧ್ಯಾಯ 2ರಲ್ಲಿ ಇರುವುದರಿಂದ ನಾವು "ಸಭೆಯ" ಬಗೆಗೆ ಓದುತ್ತೇವೆ (5:11; 8:1, 3), ಆದರೆ ರಾಜ್ಯದ ಬಗೆಗೆ ಓದುವುದಿಲ್ಲ. ಫಿಲಿಪ್ಪನು "ರಾಜ್ಯ" ಎಂಬ ಪದವನ್ನು ಯಾಕೆ ಬಳಸಿದನು? ಯಾಕೆಂದರೆ ಸಮಾರ್ಯದವರೂ ಕೂಡಾ ರಾಜ್ಯವನ್ನು ಸ್ಥಾಪಿಸುವ (ಅವರು ತಮ್ಮ ನೆರೆಯ ಯೆಹೂದಿಯರಿಂದ ಕೇಳಿದ್ದರು) ಮೆಸ್ಸಿಯನ ಬರೋಣವನ್ನು ಎದುರು ನೋಡುತ್ತಿದ್ದರು (ಯೋಹಾನ 4:25).[5]

"ದೇವರ ರಾಜ್ಯ" ಎಂಬಪದದ ಅಕ್ಷರಸಹ ಅರ್ಥವು "ದೇವರ ಆಳ್ವಿಕೆ" ಎಂದಾಗಿದ್ದು ಭೂಮಿಯ ಮೇಲೆ (ಸಭೆಯಲ್ಲಿ ಎಂಬ ವಿಷೇಶಾರ್ಥದಲ್ಲಿ[6]) ಅಥವಾ ಆಕಾಶದಲ್ಲಿ (ಯಾಕೋಬ 2:5) ಎಂಬುದಾಗಿದೆ. ಈ ಸಂದರ್ಭದಲ್ಲಿ, ಸಭೆಯ ಮೇಲೆ ಎಂಬ ಫಿಲಿಪ್ಪನ ಒತ್ತಿ ಹೇಳುವಿಕೆಯು ಸಂಶವಿಲ್ಲದ್ದಾಗಿದೆ. ನಾವು ಸಭೆಯ - ಕ್ರಿಸ್ತನಿಗಾಗಿ ಕಟ್ಟಿದ ಸಭೆಗಾಗಿ ಬೋಧಿಸುವುದನ್ನು ಬಿಟ್ಟು ಬಿಟ್ಟು "ಕ್ರಿಸ್ತನ ಬಗೆಗೆ ಬೋಧಿಸುವುದನ್ನು" ಸಂಪೂರ್ಣಗೊಳಿಸಲಾರೆವು (ಮತ್ತಾಯ 16:18). ಕ್ರಿಸ್ತನು ಸಭೆಗಾಗಿ ಸತ್ತನು (ಅಪೊಸ್ತಲರ ಕೃತ್ಯಗಳು 20:28), ಕ್ರಿಸ್ತನು ಸಭೆಯ ತಲೆಯಾಗಿದ್ದಾನೆ (ಎಫೆಸ 1:22, 23), ಮತ್ತು ಕ್ರಿಸ್ತನು ಸಭೆಯನ್ನು ತಾಳಿಕೊಳ್ಳುವವನೂ ಮತ್ತು ರಕ್ಷಕನೂ ಆಗಿದ್ದಾನೆ (ಎಫೆಸ 5:23-25)!

ಫಿಲಿಪ್ಪನ "ದೇವರ ರಾಜ್ಯದ ಬಗೆಗೆ ಅಥವಾ ಸಭೆಯ ಸುವಾರ್ತೆಯನ್ನು" ಸಾರಿದಾಗ, ಆತನು ಏನನ್ನು ಹೇಳಿರಬಹುದು? ಆತನು ದೇವರ ರಾಜ್ಯ/ಸಭೆಯು ಸಂಸ್ಥಾಪಿತವಾಗ ಬೇಕೆಂಬ ಸುವಾರ್ತೆಯನ್ನು ಹಂಚಿಕೊಂಡಿರಬಹುದು. ಸಭೆಯಲ್ಲಿ ಅಸ್ತಿತ್ವದಲ್ಲಿರುವ ಅನ್ಯೋನ್ಯತೆಯ ಬಗೆಗೆ ಆತನು ಹೇಳಿರಬಹುದು. ಆತನು ಸಭೆಯ ಎಷ್ಟು ಜನ ಸದಸ್ಯರು ದೇವಾರಾಧನೆಗಾಗಿ ಮತ್ತು ದೇವರನ್ನು ಸೇವಿಸಲು ಮತ್ತು ಇತರವುಗಳಿಗಾಗಿ ಅಲ್ಲಿ ಕೂಡುತ್ತಿದ್ದರು ಎಂದು ಆತನು ವಿವರಿಸಿರಬಹುದು.

## ಕ್ರಿಸ್ತನ ಹೆಸರು (8:12)

ಫಿಲಿಪ್ಪನು "ಕ್ರಿಸ್ತನ ಬೋಧನೆಯನ್ನು" ಮಾಡುವಾಗ "ಯೇಸುಕ್ರಿಸ್ತನ ಹೆಸರಿನಲ್ಲಿ" ಬೋಧಿಸುತ್ತಿದ್ದನು. ಜನರು ಆತನ ಪರಿಶುದ್ಧ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುತ್ತಿದ್ದರು (2:38). ಅಧ್ಯಾಯ 3-4ಗಳನ್ನು ನಾವು ಅಭ್ಯಾಸಿಸುತ್ತಿರುವಾಗ ಯೇಸುವು ಯಾವುದ ಕ್ಕೋಸ್ಕರ ಸೂಚಿಸಿತವಾಗಿದ್ದಾನೋ ಆ ಹೆಸರನ್ನು ನಾವು ಒತ್ತಿ ಹೇಳಿದ್ದೇವೆ. ಜನರು ಆತನ ಪರಿಶುದ್ಧ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿದರು. ಅಪೊಸ್ತಲರು ಯೇಸುವಿನ ಹೆಸರಿನಲ್ಲಿ ಸ್ವಸ್ಥಮಾಡುತ್ತಿದ್ದರು (3:16). ಶಿಷ್ಯರು ಬಹುಬೇಗನೇ ಆತನ ಹೆಸರನ್ನು ಧರಿಸಿಕೊಂಡರು (11:26; 26:28). ಒಬ್ಬ ಬೋಧಕನು ಒಂದು ಸಾರಿ ಹೀಗೆ ಪ್ರಕಟಿಸಿದನು "ಯಾವ ಹೆಸರಿನಲ್ಲಿಯೂ ಏನೂ ಇಲ್ಲ!" ತಕ್ಷಣವೇ, ವೀಕ್ಷಕರೆಡೆಯಿಂದ ಒಬ್ಬನು "ಬೆಲ್ಜಿಬೂಲನಿಗೆ ಮಹಿಮೆಯಾಗಲಿ!" ಎಂದು ಕೂಗಿದನು. ಆ ಮನುಷ್ಯನು "ಹೆಸರಿನಲ್ಲಿ ಅರ್ಥವಿದೆ" ಎಂಬುದಾಗಿ ತೋರಿಸಿ ಜನರನ್ನು ಆಶ್ಚರ್ಯಗೊಳಿಸಿದನು! ಆಫ್ರಿಕಾದ ಒಂದು ಕೂಟದ ಸ್ಥಳದಲ್ಲಿ ಈ ಎರಡು ವಚನಗಳು ಎಲ್ಲರೂ ನೋಡುವಂತೆ ಎತ್ತರದಲ್ಲಿ ಮುದ್ರಿತವಾಗಿದ್ದವು: "ಎಲ್ಲ *ಕ್ರೈಸ್ತಸಭೆಗಳು* ನಿಮಗೆ ವಂದನೆ ಸಲ್ಲಿಸುತ್ತವೆ"; "ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ" (ರೋಮಾಪುರ 16:16; ಅಪೊಸ್ತಲರ ಕೃತ್ಯಗಳು 4:12; ಒತ್ತಿ ಹೇಳಿದ್ದು ನನ್ನದು). ಒಂದು ವೇಳೆ ನಾವು "ಕ್ರಿಸ್ತನ ಬೋಧನೆಯನ್ನೂ" ಮಾಡಿದ್ದಾದರೆ, ನಾವು ಆತನ ಹೆಸರನ್ನು ಮಹಿಮೆಪಡಿಸುತ್ತೇವೆ.

## ಕ್ರಿಸ್ತನ ರಕ್ಷಣೆಯ
## ಶರತ್ತುಗಳು (8:12)

ಅಂತಿಮವಾಗಿ, ಫಿಲಿಪ್ಪನು ಸಮಾರ್ಯದವರಿಗೆ "ಕ್ರಿಸ್ತನ ಬಗೆಗೆ ಬೋಧನೆ"ಯನ್ನು ಮಾಡಿದಾಗ, ಆತನು ದೀಕ್ಷಾಸ್ನಾನದ ಬಗೆಗೆ ಬೋಧಿಸಿದನು. ಒಂದು ವೇಳೆ "ಕ್ರಿಸ್ತನ ಬೋಧನೆಯು" ದೀಕ್ಷಾಸ್ನಾನವನ್ನು ಒಳಗೊಂಡಿರದಿದ್ದರೆ, ಸಮಾರ್ಯದವರು ದೀಕ್ಷಾಸ್ನಾನದ ಬಗೆಗೆ ತಿಳಿಯುತ್ತಿರಲಿಲ್ಲ. ಹಿಂದಿನ ಸಮಯದಲ್ಲಿ, ಬೋಧಕರು "ಕ್ರಿಸ್ತನ ಬೋಧನೆಯನ್ನೂ" ತೋರಿಸಲು ದೃಷ್ಟಾವಳಿಯ ಪ್ರಾಯೋಗಿಕವನ್ನು ತೋರಿಸುವುದು ದೀಕ್ಷಾಸ್ನಾನದ ಬಗೆಗೆ ಬೋಧಿಸುವುದನ್ನೂ ಒಳಗೊಂಡಿತ್ತು. ಬೋಧಕನು ತನ್ನ ಕೇಳುಗರಿಗೆ "ನಾನು ಬಾಲಕರಲೊಬ್ಬನಿಗೆ ಸೂಚನೆಯನ್ನು ಕೊಡುವೆನು" ಎಂದು ಹೇಳಬಹುದು. ಆತನು ಒಬ್ಬ ಚಿಕ್ಕ ಬಾಲಕನನ್ನು ಮುಂದೆ ಕರೆದು ಆತನ ಕಿವಿಯಲ್ಲಿ ಪಿಸುಗುಡುವನು. ಆ ಹುಡುಗನು ಹೊರಗೆ ಓಡಿ ಹೋಗುವನು ಮತ್ತು ಒಂದು ಕಲ್ಲಿನೊಡನೆ ಹಿಂತಿರುಗುವನು. ಬೋಧಕನು ತನ್ನ ಕೇಳುಗರಿಗೆ, "ನಾನು ಏನು ಮಾಡಲು ಆತನಿಗೆ ಹೇಳಿದೆನೆಂದು ಭಾವಿಸಿದ್ದೀರಿ?" ಎಂದು ಕೇಳುತ್ತಾನೆ. ಆದರಲ್ಲಿ ಅನೇಕರು "ನೀನು ಅವರಿಗೆ ಹೊರಗೆ ಹೋಗಲು ಹೇಳಿದೆ ಮತ್ತು ಕಲ್ಲನ್ನು ತರಲು ಹೇಳಿದೆ" ಎಂದು ಉತ್ತರಿಸಿದರು. ಬೋಧಕರು ಹಾಗೆಯೇ ಮುಂದುವರೆಸುತ್ತಾ, "ನಾನು ಹಾಗೆ ಹೇಳಿದೆ ಎಂದು ಯಾಕೆ ನೆನೆಸುತ್ತೀರಿ." "ಯಾಕೆಂದರೆ ಆತನು ಹಾಗೆ ಮಾಡಿದ್ದರಿಂದಲೇ" "ಹೌದು" ಎಂದಾಗ ಬೋಧಕರು ಮುಗುಳ್ನಗೆಯಿಂದ ಹೇಳಿದರು "ಸಮಾರ್ಯದವರು ಏನು ಮಾಡಿದರು ಎಂಬುದನ್ನು ನಾವು ನೋಡುವಾಗ. ಫಿಲಿಪ್ಪನು ಹಾಗೆ ಮಾಡಲು ಹೇಳಿದನು ಎಂದು ನಾವು ತಿಳಿಯುತ್ತೇವೆ" ಎಂದನು.

ಕ್ರಿಸ್ತನೂ ಮತ್ತು ದೀಕ್ಷಾಸ್ನಾನವೂ ಬೇರೆಯಾದುದಲ್ಲ. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು (ಮತ್ತಾಯ 3:13-17). ಆತನು ದೀಕ್ಷಾಸ್ನಾನದ ಆಜ್ಞೆಯನ್ನು ಮಾಡಿದನು (ಮತ್ತಾಯ 28:19; ಮಾರ್ಕ 16:16). ದೀಕ್ಷಾಸ್ನಾನವು ಆತನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನದಂತಿದೆ (ರೋಮಾಪುರ 6:3-6). ನಾವು ಕ್ರಿಸ್ತನಲ್ಲಿ ದೀಕ್ಷಾಸ್ನಾನವನ್ನು ಹೊಂದಿದ್ದೇವೆ (ಗಲಾತ್ಯ 3:26, 27). ಒಂದು ವೇಳೆ ನಾವು ಮತ್ತು ನೀವು "ಕ್ರಿಸ್ತ

ಬೋಧನೆಯಲ್ಲಿ" ಪೂರ್ಣವಾಗಿ ಇದ್ದರೆ, ದೀಕ್ಷಾಸ್ನಾನದ ಅವಶ್ಯಕತೆಯು ನಮ್ಮ ಸಂದೇಶದ ಭಾಗವಾಗಿರುವದು.[7]

## ಮುಕ್ತಾಯ


ಯೇಸುವನ್ನು ಪ್ರಕಟಿಸುವದು ಎಂಬುದರ ಅರ್ಥವನ್ನು ನಾವು ನೋಡಿದೆವು. ಯೇಸುವನ್ನು ಬೋಧಿಸುವುದು ಕೇವಲ ಆತನ ವ್ಯಕ್ತಿಯ ಸುತ್ತಲೂ ಇರುವ ಶ್ರೇಷ್ಟ ಸತ್ಯಗಳನ್ನು ಬೋಧಿಸುವುದನ್ನು ಮಾತ್ರ ಒಳಗೊಂಡಿರುವುದಿಲ್ಲ, ಆದರೆ ರಾಜ್ಯದ/ಸಭೆಯ ಬಗೆಗೆ ಬೋಧಿಸುವುದನ್ನೂ, ಆತನ ಹೆಸರಿನಲ್ಲಿ ಬೋಧಿಸುವುದನ್ನು, ಮತ್ತು ದೀಕ್ಷಾಸ್ನಾನದ ಬಗೆಗೆ ಸಹ ಒಳಗೊಂಡಿದೆ. ಇದರಲ್ಲಿ ಇತರ ವಿಷಯಗಳನೂ ಕೂಡಾ ಸೇರಿಸಬಹುದು,[8] ಆದರೆ ಈ "ಕ್ರಿಸ್ತನನ್ನು ಬೋಧಿಸುವದು" ಎಂಬುದರಲ್ಲಿ ಭವ್ಯವಾದ ಮತ್ತು ಸಮಗ್ರವಾದ ಅಂಶಗಳೂ ಒಳಗೊಂಡಿವೆ.

"ಕ್ರಿಸ್ತನನ್ನು ಕೆಲವರು ಬೋಧಿಸುವುದನ್ನು" ನಾನು, ನಾನು ಓದಿದ ಸಭೆಗೆ ಹೋಲಿಸ ಬಹುದು. ಈ ಸಭೆಯು ತನ್ನ ಕಟ್ಟಡದ ಬದಿಯಲ್ಲಿ "ನಾವು ಕ್ರಿಸ್ತನು ಕ್ರೂಜಿಸಲ್ಪಟ್ಟದ್ದನ್ನು ಬೋಧಿಸುತ್ತೇವೆ" ಎಂಬ ದೊಡ್ಡ ಪರದೆಯನ್ನು ಹೊಂದಿಕೊಂಡಿದೆ. ಸಮಯವು ಕಳೆದಂತೆ, ಕೆಲ ಸಭೆಗಳು ರಕ್ತ ಬಲಿಯಂತಹ ವಿಚಾರಗಳಿಂದ ಗಲಿಬಿಲಿಗೊಳಗಾದವು, ಹೀಗೆ "ಕ್ರೂಜಿತನಾದ" ಎಂಬ ಪದವು ಬಣದಿಂದ ಅಳಿಸಿಹಾಕಲ್ಪಟ್ಟಿತು. ನಂತರ ಉಳಿದ್ದದ್ದು "ನಾವು ಕ್ರಿಸ್ತನನ್ನು ಬೋಧಿಸುತ್ತೇವೆ" ಎಂದು. ಹೀಗಿರುವಲ್ಲಿ ಒಬ್ಬ ಹೊಸ ಬೋಧಕರು ಬಂದರು. ಅವರು ಯೇಸುವಿನ ಕಥೆಗಿಂತ ಪ್ರಚಲಿತ ವಿಷಯಗಳ ಬಗೆಗೆ ಕಾಳಜಿಯುಳ್ಳವ ರಾಗಿದ್ದರು, ಹೀಗಾಗಿ "ಯೇಸು" ಎಂಬದೂ ಕೂಡಾ ಅಳಿಸಿಹಾಕಲ್ಪಟ್ಟಿತು. ನಂತರ ಉಳಿದಿದ್ದು ಆ ಫರದೆಯ ಮೇಲೆ ನಾವು ಬೋಧಿಸುತ್ತೇವೆ ಎಂಬುದು ಮಾತ್ರ ಉಳಿಯಿತು. ಅಂತಿಮ ವಾಗಿ ಸಂದೇಶವು ಜನರನ್ನು ಮುಟ್ಟಲು ಬೋಧಿಸುವುದು ಒಂದೇ ಮಾರ್ಗವಲ್ಲ ಎಂದರಿತು "ಬೋಧನೆ" ಎಂಬುದನ್ನು ಆಳಿಸಿಹಾಕಿದರು ಮತ್ತು ಅವುಗಳು ಕೇವಲ ನಾಟಕಗಳು ಹಾಗೂ ಸಂಗೀತದ ಸಂಗತಿಗಳನ್ನು ಹೊಂದಿದವು. ಅನಂತರ ನಾವು ಆ ಬೋರ್ಡನ್ನು ಸರಳವಾಗಿ "ನಾವು" ಎಂಬ ಪದ ಮಾತ್ರ ಉಳಿದಿದ್ದನ್ನು ಓದುತ್ತೇವೆ. ನಮ್ಮ ದೇವರು "ಕ್ರಿಸ್ತನನ್ನು ಬೋಧಿ ಸುವದು ಮತ್ತು ಆತನನ್ನು ಕ್ರೂಜಿಸಿದ್ದು" ಎಂಬ ಸಂಪೂರ್ಣ ಭಾಗದಲ್ಲಿ ಯಾವುದೆ ಭಾಗವು "ನಮ್ಮನ್ನು ಬಿಟ್ಟುಹೋಗದಂತೆ ಆ ದೇವರೆ ನಮಗೆ ಸಹಾಯಿಸಲಿ!"

ಚರ್ಚಿಸಿದ ಈ ವಿಷಯವು ಈ ಪಾಠಕ್ಕೆ ಹತ್ತಿರದಿಂದ ಸಂಭಧಿತವಾದುದು - ಯಾವಾಗ ನಾವು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುತ್ತೇವೆಯೋ, ಆಗ ದೇವರು ಯಾರು ಕ್ರಿಸ್ತನನ್ನು ಧರಿಸಿರುತ್ತಾರೋ ಅವರಿಗೆ ಕ್ರಿಸ್ತನ ಹೆಸರನ್ನು ಹೊಂದಿದ ರಾಜ್ಯದಲ್ಲಿ/ಸಭೆಯಲ್ಲಿ ಕೂಡಿಸುವವನಾಗಿದ್ದಾನೆ (2:38, 41, 47; ಕೊಲಸ್ಸೆ 1:13; ರೋಮಾಪುರ 16:16). ನೀನು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುವುದಕ್ಕೆ ಬಯಸುವವನಾಗಿದ್ದೀಯಾ, ಹೀಗೆ ದೇವರು ತನ್ನ ರಾಜ್ಯದಲ್ಲಿ ಸಭೆಯಲ್ಲಿ ನಿನ್ನನ್ನು ಸೇರಿಸುವನೋ? ವಚನ 12ನ್ನು ಪುನಃ ಗಮನಿಸು: "ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು [ಸಮಾರ್ಯದ] ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು." ಅವರು ನಂಬಿದಾಗ, ಅವರು ವಿಧೇಯರಾದರು! ಅವರು ಕಾಯಲಿಲ್ಲ; ಅವರು ಹಿಂದೆಮುಂದೆ ಮಾಡಲಿಲ್ಲ; ಅವರು ದೇವರು ತಾವೇನು ಮಾಡಬೇಕೆಂದು ಬಯಸುವವನಾಗಿದ್ದಾನೋ ಅದನ್ನೇ ಮಾಡಿದರು![9] ನೀನೂ ಹಾಗೇ ಮಾಡುತ್ತೀಯಾ?

ಟಿಪ್ಪಣಿಗಳು

[1]ಕೆಲಸಾರಿ ಇಂಗ್ಲೀಷನಲ್ಲಿ "ಸಿಗ್ಮಂಡ" ಎಂದು ಉಚ್ಚರಿತವಾಗುತ್ತದೆ. ಇವರು ಒಬ್ಬ ಶ್ರೇಷ್ಟ ಕೋರಿಯನ ನಾಯಕಾಗಿದ್ದರು. [2]ಈ ಹೇಳಿಕೆಯು ಬರ್ಟನ ಕಾಫಮನ್ ಅವರಿಂದ ವ್ಯಾಖ್ಯಾನಿಸಲ್ಪಟ್ಟಿದೆ. [3]1 ಕೊರಿಂಥ 1:23, 24; 2:2; ಗಲಾತ್ಯ 6:14ನ್ನು ನೋಡಿರಿ. [4]John A. Redhead, *Getting To Know God (and other sermons)* (New York: Abingdon Press, 1954), 8. [5]ಧರ್ಮಶಾಸ್ತ್ರದ ಐದು ಪುಸ್ತಕಗಳಲ್ಲಿ (ಅವರು ಒಪ್ಪಿಕೊಂಡ), ಸಮಾರ್ಯದವರು ಈ ಜಗತ್ತಿಗೆ ಬಂದ ಮೋಶೆಯಂತಹ ಪ್ರವಾದಿಗಳ ಬಗೆಗೆ ಕಲಿತರು (ಧರ್ಮೋಪದೇಶಕಾಂಡ 18:15, 18, 19) ಪ್ರವಾ ದಿಗಳು ಅಭಿಶಕ್ತರಾದ್ದರಿಂದ, ಇದು ಸಮಾರ್ಯದವರಿಗೆ ಸ್ವಾಭಾವಿಕವಾದುದು ಆಗಿದ್ದು "ಮೆಸ್ಸೀಯ" ಎಂಬುದು ಯೋಗ್ಯವಾದ ಯೆಹೂದಿ ಪದವಾಗಿದೆ (ಅಭಿಶಕ್ತನಾದವನು), ಅದರ ಜೊತೆ ಕೆಲ ಯೆಹೂದಿ ಮೆಸ್ಸೀಯ ಎಂಬ ಪರಿಕಲ್ಪನೆಯ ಜೊತೆ ಕೂಡಿದ್ದು ಆಗಿದೆ. [6]ಮತ್ತಾಯ 16:18, 19ರಲ್ಲಿನ "ರಾಜ್ಯ" ಮತ್ತು "ಸಭೆ" ಎಂಬ ಪದಗಳು ಅಂತರ್ ಬದಲಾವಣೆಯೊಂದಿಗೆ ಬಳಸಲ್ಪಟ್ಟಿದ್ದನು interchangeably ಎಂಬ ಪದವನ್ನು ಗಮನಿಸಿರಿ. "ಸಂಪ್ರದಾಯವಾದಿ ಮತ್ತು ಕ್ರಾಂತಿಕಾರಿ" ಪಂಡಿತರಂತವರು ಕಾಲಗಳುದ್ದಕ್ಕೂ ಈ ನಿಜಾಂಶದ ಮೇಲೆ "ಸಭೆ ಮತ್ತು ದೇವರ ರಾಜ್ಯವು ಒಂದೆ ಸಂಸ್ಥೆಯಾಗಿದೆ" ಎಂದು ಗಮನಿಸಿದ್ದಾರೆ (ಕಾಫಮ್ಯಾನ್, 157). [7]ಈ ಅಂಶವು ನಮ್ಮ ಮುಂದಿನ ಪಾಠವಾದ ಕಂಚುಕಿಯ ಪರಿವರ್ತನೆಯಲ್ಲಿ ಕೊಡಲಾಗಿದೆ. [8]ಕ್ರೈಸ್ತರಾದನಮಗೆ ಇರುವ ಅನೇಕ ಜವಾಬ್ದಾರಿಗಳನ್ನು ಇದರಲ್ಲಿ ನಾವು ಸೇರಿಸಬಹುದು. [9]ಮತ್ತಾಯ 6:33; ಇಬ್ರಿಯ 4:7; 2 ಕೊರಿಂಥ 6:2; ಪ್ರಸಂಗಿ 12:1.




*ಹಳೆಯ ಒಡಂಬಡಿಕೆಯ ಜಗತ್ತಿನ ಭೂಪಟ*